Annexure - II

(Reference 1.2)

30

Received

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆ, ಬೆಂಗಳೂರು — ಇದರ ಪುನರ್ಸಂಘಟನೆ — ಆದೇಶ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 53 ಸಇತ 77, ದಿನಾಂಕ 23-1-1978

2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 1 ಸೇಇತ 84, ದಿನಾಂಕ 25-9-1985.

ಪೀಠಿಕೆ:

ಮೇಲಿನ ಕ್ರಮಾಂಕ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪ್ರತ್ಯೇಕ ಇಲಾಖೆಯಾದ ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆಯನ್ನು, ಆ ಆದೇಶದಲ್ಲಿ ನಮೂದಿಸಿದ ಸಿಬ್ಬಂದಿಯೊಂದಿಗೆ ಸ್ಥಾಪನೆ ಮಾಡಲು ಸರ್ಕಾರ ಮಂಜೂರಾತಿ ನೀಡಿದೆ. ಈ ತರಬೇತಿ ಸಂಸ್ಥೆಯನ್ನು ಹಾಗೂ ಇದರ ಸಿಬ್ಬಂದಿಯನ್ನು ಕ್ರಮಾಂಕ (2) ರಲ್ಲಿ ಓದಲಾದ ಆದೇಶದಲ್ಲಿ ತಾತ್ಕಾಲಿಕ ಆಧಾರದ ಮೇಲೆ ಮುಂದುವರಿಸಿ ಸರ್ಕಾರ ಆದೇಶ ನೀಡಿದೆ.

ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆಯ ಪ್ರಸ್ತುತ ಕಾರ್ಯನಿರ್ವಹಣೆಯ ರೀತಿ ಅತೃಪ್ತಿಕರವಾಗಿರುವುದು ಕಂಡುಬಂದಿದೆ. ಇದರಲ್ಲಿನ ಬೋಧಕ ಸಿಬ್ಬಂದಿಯೇ ತರಬೇತಿದಾರರಿಗೆ ಉಪನ್ಯಾಸ ನೀಡಬೇಕು. ಆದರೆ ಹೊರಗಿನ ಅತಿಥಿ ಉಪನ್ಯಾಸಕರನ್ನು ಆಹ್ವಾನಿಸಲಾಗುತ್ತಿದೆ. ಬೋಧನೆ, ತರಬೇತಿ ಹಾಗೂ ಸಂಶೋಧನೆಯಲ್ಲಿ ಅನುಭವ ಇರುವ ಬೋಧಕ ಸಿಬ್ಬಂದಿ ಕೊರತೆಯಿಂದ ವೈವಿಧ್ಯತೆಯುಳ್ಳ ಹಾಗೂ ವಿಶಿಷ್ಟ ವಿಷಯಗಳಲ್ಲಿ ಅವಶ್ಯಕ ರೀತಿಯಲ್ಲಿ ತರಬೇತಿ ನೀಡಲು ಸಾಧ್ಯವಾಗುತ್ತಿಲ್ಲ. ಸಹಾಯಕ ಸಿಬ್ಬಂದಿಗೆ ಕೆಲಸವಿಲ್ಲ. ಸಂಸ್ಥೆಗೆ ಒದಗಿಸಿರುವ ಹಣ ಪೂರ್ಣ ವಿನಿಯೋಗವಾಗುತ್ತಿಲ್ಲ. ಇದರಿಂದ ಸಂಸ್ಥೆಯ ಮೂಲ ಉದ್ದೇಶ ಸಫಲವಾಗುತ್ತಿರುವುದು ಈಡೇರಿಲ್ಲ. ಇಂತಹ ಸ್ಥಿತಿಯಲ್ಲಿ ಸಂಸ್ಥೆಯು ಇದೇ ರೀತಿ ಮುಂದುವರಿಯುವುದು ಅಪೇಕ್ಷಣೀಯವಲ್ಲ. ಆದ್ದರಿಂದ ಸಚಿವಾಲಯದ ಸಿಬ್ಬಂದಿಗೆ ಪರಿಣಾಮಕಾರಿ ತರಬೇತಿ ನೀಡುವ ದೃಷ್ಟಿಯಿಂದ ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆಯ ಕಾರ್ಯನಿರ್ವಹಣೆ ಹಾಗೂ ಸಿಬ್ಬಂದಿ ವ್ಯವಸ್ಥೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡುವುದು ಸೂಕ್ತವೆಂದು ಸರ್ಕಾರ ತೀರ್ಮಾನಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 76 ಸಇತ 88, ಬೆಂಗಳೂರು, ದಿನಾಂಕ: 31-12-1988**

ಪೀಠಿಕೆಯಲ್ಲಿ ವಿವರಿಸಿರುವ ಸನ್ನಿವೇಶದಲ್ಲಿ ಓದಲಾದ ಸರ್ಕಾರಿ ಆದೇಶ (1) ಮತ್ತು (2) ನ್ನು ಮಾರ್ಪಡಿಸಿ, ಕರ್ನಾಟಕ ಸರ್ಕಾರದ ಸಚಿವಾಲಯದ ತರಬೇತಿ ಸಂಸ್ಥೆಯ ಸಿಬ್ಬಂದಿ ಮತ್ತು ಕಾರ್ಯನಿರ್ವಹಣೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ವ್ಯವಸ್ಥೆ ಮಾಡಲು ಸರ್ಕಾರ ಮಂಜೂರಾತಿ ನೀಡಿದೆ.

ಸಿಬ್ಬಂದಿ ವ್ಯವಸ್ಥೆ:

| ಹುದ್ದೆ ಹೆಸರು | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|
| 1. ನಿರ್ದೇಶಕರು (ಸರ್ಕಾರದ ಅಪರ ಕಾರ್ಯದರ್ಶಿ ಅಥವಾ ಸಹ ಕಾರ್ಯದರ್ಶಿ ದರ್ಜೆಯ ಹುದ್ದೆ) | ರೂ.4550 — 5600 | 1 |
| 2. ಉಪ ನಿರ್ದೇಶಕರು (ಅಧೀನ ಕಾರ್ಯದರ್ಶಿ ಅಥವಾ ಸಹಾಯಕ ಕಮೀಷನರ ದರ್ಜೆಯ ಹುದ್ದೆ) | ರೂ.2200–4070 | 1 |
| 3. ಸಹಾಯಕ ನಿರ್ದೇಶಕರು (ಶಾಖಾಧಿಕಾರಿ ದರ್ಜೆಯ ಹುದ್ದೆ) | ರೂ.1900–3650 | 1 |
| 4) ಹಿರಿಯ ಸಹಾಯಕ ಹಾಗೂ ಲೆಕ್ಕಿಗ | ರೂ.1600–2990 | 1 |
| 5) ಸಹಾಯಕ | ರೂ.1280–2450 | 1 |
| 6) ಶೀಘ್ರಲಿಪಿಗಾರ | ರೂ.1280–2450 | 1 |
| 7) ಕಿರಿಯ ಸಹಾಯಕ | ರೂ. 960–1760 | 1 |
| 8) ಬೆರಳಚ್ಚುಗಾರ | ರೂ. 960–1760 | 1 |
| 9) ಸೇವಕರು | ರೂ. 780–1040 | 4 |
| | ಒಟ್ಟು — | 12 |

... 2.

2. ಮೇಲೆ ತಿಳಿಸಿರುವ ಹುದ್ದೆಗಳನ್ನು ಭರ್ತಿ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾ ಇಲಾಖೆಯ ಸೇವೆಗಳು : ಸಿಬ್ಬಂದಿ : ಆಡಳಿತ ಶಾಖೆಗಳು ಶೀಘ್ರ ಕ್ರಮ ಕೈಗೊಳ್ಳತಕ್ಕದ್ದು.

3. ಹೊಸ ವ್ಯವಸ್ಥೆಯಲ್ಲಿ ಸಂಸ್ಥೆಯ ಪೂರ್ಣ ಉಸ್ತುವಾರಿ ಕಾರ್ಯಕ್ರಮ ಸಂಯೋಜಕರದಾಗಿರುತ್ತದೆ. ಇವರು ಸಚಿವಾಲಯಕ್ಕೆ ಬೇಕಾದ ಎಲ್ಲಾ ತರಬೇತಿಗಳ ಕಾರ್ಯ ಕ್ರಮ ಷೆಡ್ಯೂಲ್ ಅನ್ನು ಯೋಜಿಸಿ ತಯಾರಿಸತಕ್ಕದ್ದು.

4. ಸಂಪರ್ಕಾಧಿಕಾರಿಗಳು ಸಂಸ್ಥೆಯ ದೈನಂದಿನ ಚಟುವಟಿಕೆಗಳನ್ನು ನೋಡಿಕೊಳ್ಳತಕ್ಕ ಮತ್ತು ಕಾರ್ಯಕ್ರಮ ಸಂಯೋಜಕರಿಗೆ ಸಹಾಯಕರಾಗಿರತಕ್ಕದ್ದು.

5. ತರಬೇತಿಗಳನ್ನು ಅತಿಥಿ ಉಪನ್ಯಾಸಕರಿಂದ ನಡೆಸತಕ್ಕದ್ದು.

6. ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ. ಸಂಖ್ಯೆ ಆಇ 1406 ವೆಚ್ಚ—7:88, ದಿನಾಂಕ 2—8—88 ರಲ್ಲಿ ಸಹಮತಿ ಪಡೆದು ಹೊರಡಿಸಿದೆ.

ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

(ಎ. ಮುನಿಯಲ್ಲಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆ—3)

ಇವರಿಗೆ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ನಿರ್ದೇಶಕರು, ಕರ್ನಾಟಕ ಸರ್ಕಾರದ ಸಚಿವಾಲಯ ತರಬೇತಿ ಸಂಸ್ಥೆ, ಬೆಂಗಳೂರು
3) ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು
4) ಅಧೀನ ಕಾರ್ಯದರ್ಶಿಗಳು, ಸೇವೆಗಳು— 1, 2,/ಲೆಕ್ಕಪತ್ರ
5) ವಾರಪತ್ರಿಕೆ : ರಕ್ಷಾ ಕಡತ : ಬಿಡಿಪ್ರತಿ ಶಾಖೆ : ಸಚಿವಾಲಯ ತರಬೇತಿ ಸಂಸ್ಥೆ ರಕ್ಷಾ ಕಡ